ಓ.ಎಸ್.68-2019

ಪಿಡಬ್ಲು-2

ದಿ: 08-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಕೆ.ಆರ್.ಎ ವಕೀಲರಿಂದ.

ನಾನು ವಕೀಲ ವೃತ್ತಿ ಮಾಡಿಕೊಂಡಿರುತ್ತೇನೆ. ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು ವಾದಿಯ ಹೇಳಿಕೆ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೊಸಕೋಟೆ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡಿಕೊಂಡಿರುತ್ತೇನೆ. ನಾನು ಹೊಸಕೋಟೆ ಪಟ್ಟಣ್ಣದ ಟಿ.ಎ.ಪಿ.ಸಿ.ಎಂ.ಸಿ ಕಟ್ಟಡದ ಮೊದಲನೇ ಮಹಡಿಯಲ್ಲಿ ಕಛೇರಿಯನ್ನು ಹೊಂದಿರುತ್ತೇನೆ. ನಾನು ಮತ್ತು ಪ್ರಸ್ತುತ ದಾವೆಯ ವಾದಿಯ ವಕೀಲರು ಒಂದೇ ಕಛೇರಿಯಲ್ಲಿ ಕೆಲಸ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

2. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ಕಛೇರಿಯು ನನ್ನ ಕಛೇರಿ ಆಗಿರುತ್ತದೆ ಎಂದರೆ ಸರಿ. ಸದರಿ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.5 ಎಂದು ಗುರುತಿಸಲಾಯಿತು. ನಿ.ಡಿ.5 ರಲ್ಲಿ ನಾನು ಮತ್ತು ವಾದಿ ಪರ ವಕೀಲರು ಒಂದೇ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿಯು ನಮ್ಮಿಬ್ಬರ ಕೊಠಡಿಗಳು ಬೇರೆ ಬೇರೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ಮತ್ತು ವಾದಿ ವಕೀಲರ ಕೊಠಡಿಗಳು ಬೇರೆ ಬೇರೆ ಇದೆ ಎಂದು ತೋರಿಸುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ನಾನು ಮತ್ತು ವಾದಿ ಪರ ವಕೀಲರು ಒಟ್ಟಿಗೆ ಶ್ರೀ ಸಾಯಿ ಲಾ ಅಸೋಸಿಯೇಟ್ಸ ಎನ್ನುವ ಜಂಟಿ ವಕೀಲರ ಕಛೇರಿಯನ್ನು ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾಮಫಲಕ ಆ ರೀತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.6 ಎಂದು ಗುರುತಿಸಲಾಯಿತು.

3. ವಾದಿಯು ನಮ್ಮ ಊರಿನವರಾದ ಮೇರೆಗೆ ನಾನೇ ಸ್ವತ: ವಾದಿಯನ್ನು ಕರೆದುಕೊಂಡು ಬಂದು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನಾನು ವಾದಿಯನ್ನು ಸ್ವತ: ಕರೆದುಕೊಂಡು ಬಂದು ನನ್ನ ಕಛೇರಿಯಿಂದ ದಾವೆಯನ್ನು ದಾಖಲಿಸಿ ಉದ್ದೇಶ ಪೂರಕವಾಗಿ ವಕಾಲತ್ ನಾಮೆಯಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ೧ನೇ ಪ್ರತಿವಾದಿ ವಿರುದ್ಧ ಮೂಲ ದಾವೆ ಸಂಖ್ಯೆ 28/2020 ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಮೂಲ ದಾವೆ ಸಂಖ್ಯೆ 28/2020 ದಾವೆಯು ತನಿಖೆಗೆ ಬಾಕಿ ಇರುತ್ತದೆ ಎಂದರೆ ಸರಿ. ದಿ: 26.03.2016 ರಂದು ೧ನೇ ಪ್ರತಿವಾದಿಯು ನನ್ನ ಮತ್ತು ನನ್ನ ಅಣ್ಣನ ವಿರುದ್ಧ ಅಪರಾಧಿಕ ಪ್ರಕರಣ ಸಂಖ್ಯೆ 1371/2016 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಿ: 26.03.2016 ರಂದು ೧ನೇ ಪ್ರತಿವಾದಿ ನನ್ನ ವಿರುದ್ಧ ದೂರು ದಾಖಲಿಸಿದ ನಂತರ ನಾನು ೧ನೇ ಪ್ರತಿವಾದಿ ಮತ್ತು ಇತರರ ವಿರುದ್ಧ ಪ್ರತಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಮೊದಲು ದೂರು ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಆ ರೀತಿ ನಾನು ದಾಖಲಿಸಿದ್ದ ಪಿರ್ಯಾದ್ದಿನ ಮೇರೆಗೆ ಅಪರಾಧಿಕ ಪ್ರಕರಣ ಸಂಖ್ಯೆ 1793-2016 ಎಂದು ದಾಖಲಾಗಿರುತ್ತದೆ ಎಂದರೆ ಸರಿ.

5. ನನ್ನ ಮತ್ತು ೧ನೇ ಪ್ರತಿವಾದಿ ನಡುವೆ ದಾರಿ ವಿಚಾರವಾಗಿ ವೈಮನಸ್ಸು ಇದೆ ಎಂದರೆ ಸರಿಯಲ್ಲ. ನನ್ನ ಮತ್ತು ೧ನೇ ಪ್ರತಿವಾದಿಯ ನಡುವೆ ದಾರಿ ವಿಚಾರವಾಗಿ ಬಹಳ ದಿನಗಳಿಂದ ನಮ್ಮ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾರಿ ವಿಚಾರವಾಗಿ ೧ನೇ ಪ್ರತಿವಾದಿಯ ವಿರುದ್ದ ಮೂಲ ದಾವೆ ಸಂಖ್ಯೆ 28/2020 ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

6. ನಾನು ಮತ್ತು ನನ್ನ ಅಣ್ಣ ೧ನೇ ಪ್ರತಿವಾದಿಯ ವಿರುದ್ದ ತಾಲ್ಲೂಕು ಪಂಚಾಯ್ತಿ ಕಾರ್ಯಾಲಯ, ಹೊಸಕೋಟೆ ನ್ಯಾಯಾಲಯದಲ್ಲಿ ಅಪೀಲು ಸಂಖ್ಯೆ 20/2016-17 ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಅಪೀಲು ಸಂಖ್ಯೆ 20/2016-17 ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪೀಲು ಸಂಖ್ಯೆ 20/2016-17 ಪ್ರಕರಣವನ್ನು ಖಾನೇಷುಮಾರಿ ಸಂಖ್ಯೆ 64 ಸ್ವತ್ತಿನ ಕುರಿತು ದಾಖಲಿಸಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆ ಸದರಿ ಅಪೀಲು ಸಂಖ್ಯೆ 20-2016-17 ರಲ್ಲಿ ನೀಡಲಾದ ನೋಟಿಸ್ಸು ಆಗಿರುತ್ತದೆ ಎಂದರೆ ಸರಿ. ಸದರಿ ನೋಟಿಸ್ಸನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.7 ಎಂದು ಗುರುತಿಸಲಾಯಿತು. ನಿ.ಡಿ.7 ರಲ್ಲಿ ಅಪೀಲು ಸಂಖ್ಯೆ 20/2016-17 ಪ್ರಕರಣವನ್ನು ಖಾನೇಷುಮಾರಿ ಸಂಖ್ಯೆ 78ರ ಮೇಲೆ ಮಾಡಲಾಗಿರುವ ಕುರಿತು ಕಂಡು ಬರುತ್ತದೆ ಎಂದರೆ ಸರಿ.

7. ನಂಜುಂಡಪ್ಪ ಎನ್ನುವವರು ನನ್ನ ತಂದೆ. ಮುನಿಯಪ್ಪ ಎನ್ನುವವರು ನನ್ನ ದೊಡ್ಡಪ್ಪ. ನನ್ನ ತಂದೆ ನನ್ನ ದೊಡ್ಡಪ್ಪ, ಹರೀಶ್ ಮತ್ತು ೧ ಮತ್ತು 3ನೇ ಪ್ರತಿವಾದಿಗಳ ವಿರುದ್ದ ಮೂಲ ದಾವೆ ಸಂಖ್ಯೆ 2-2004 ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಮೂಲ ದಾವೆ ಸಂಖ್ಯೆ 2-2004 ದಾವೆಯನ್ನು ದಾರಿ ಹಕ್ಕು ಸಲುವಾಗಿ ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಮೂಲ ದಾವೆ ಸಂಖ್ಯೆ 2-2004 ದಾವೆಯು ರಾಜಿಯಲ್ಲಿ ಮುಕ್ತಾಯವಾಗಿರುತ್ತದೆ. ಈಗ ನನಗೆ ತೋರಿಸಿದ ದಾಖಲೆಗಳು ಸದರಿ ಮೂಲ ದಾವೆ ಸಂಖ್ಯೆ 2-2004 ದಾವೆಯ ದಾಖಲೆಗಳು ಎಂದರೆ ಸರಿ. ಮೂಲ ದಾವೆ ಸಂಖ್ಯೆ 2-2004 ದಾವೆಯ ಡಿಕ್ರಿಯ ದೃಢೀಕೃತ ಪ್ರತಿಯನ್ನು ನಿ.ಡಿ.8 ಎಂದು, ಮೂಲ ದಾವೆ ಸಂಖ್ಯೆ 2-2004 ದಾವೆಯ ರಾಜಿ ಪತ್ರದ ದೃಢೀಕೃತ ಪ್ರತಿಯನ್ನು ನಿ.ಡಿ.9 ಎಂದು, ಮೂಲ ದಾವೆ ಸಂಖ್ಯೆ 2-2004 ದಾವೆಯ ರಾಜಿ ಅರ್ಜಿಯ ದೃಢೀಕೃತ ಪ್ರತಿಯನ್ನು ನಿ.ಡಿ.10 ಎಂದು, ಮೂಲ ದಾವೆ ಸಂಖ್ಯೆ 2-2004 ದಾವೆಯ ನಡವಳಿಯ ದೃಢೀಕೃತ ಪ್ರತಿಯನ್ನು ನಿ.ಡಿ.11 ಎಂದು, ಮೂಲ ದಾವೆ ಸಂಖ್ಯೆ 2-2004 ದಾವೆಯಲ್ಲಿ ಸಲ್ಲಿಸಿದ ರಾಜಿ ನಕ್ಷೆಯ ದೃಢೀಕೃತ ಪ್ರತಿಯನ್ನು ನಿ.ಡಿ.12 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.